**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 419/2025**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಆರ್.ಎಸ್.ನಾಗೇಶ್ ಹೆಬ್ಬಾರ್

-ಃದೋಷಾರೋಪಣೆಃ-

ಶ್ರೀ ಮುಜಫರ್ ಎ. ಮಾಂಜರಿ, ಬಿ.ಎ., ಎಲ್ ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ಆರ್.ಎಸ್.ನಾಗೇಶ್ ಹೆಬ್ಬಾರ್ ಬಿನ್ ಲೇಟ್ ಹೆಚ್.ಆರ್.ಶ್ರೀನಿವಾಸ ಹೆಬ್ಬಾರ್, 43 ವರ್ಷ, ವ್ಯಾಪಾರ, ವಾಸಃಸಾಗರ ರಸ್ತೆ, ರಿಪ್ಪನ್ ಪೇಟೆ, ಹೊಸನಗರ ತಾಃ ಶಿವಮೊಗ್ಗ ಜಿಲ್ಲೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿಃ15.07.2025 ರಂದು ಸಂಜೆ 4-15 ರ ಸಮಯದಲ್ಲಿ ಚಾಸಾ-1 ಮತ್ತು 2 ರವರು ಕೆಎ-06/ಎಫ್-1327 ರ ಬಸ್ಸಿಗೆ ಚಾಲಕ ಮತ್ತು ನಿರ್ವಾಹಕರಾಗಿ ನೇಮಕರಾಗಿದ್ದು, ಅದರಂತೆ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್ ನಲ್ಲಿ ತರೀಕೆರೆ ಮಾರ್ಗವಾಗಿ ಬರುತ್ತಿರುವಾಗ ಆರೋಪಿಯಾದ ನೀವು ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಮತ್ತು ಚಾಸಾ-3 ರವರಿಗೆ ಅವಾಚ್ಯವಾಗಿ ಬೈಯುತ್ತಿದ್ದು ರಾತ್ರಿ 10-50 ರ ಸಮಯದಲ್ಲಿ ಬೈಯುತ್ತಿದ್ದ ವಿಚಾರವನ್ನು ಕೇಳಿದಾಗ ಚಾಸಾ-2 ರವರು ಚಾಸಾ-1 ರವರಿಗೆ ಬಸ್ ನಿಲ್ಲಿಸಲು ಹೇಳಿದ್ದು, ಅದರಂತೆ ಚಾಸಾ-2 ರವರು ಠಾಣಾ ಸರಹದ್ದಿನ ಕೋಡಿಕ್ಯಾಂಪ್ ಸರ್ಕಲ್ ನಿಂದ ಸ್ವಲ್ಪ ಹಿಂದೆ ಟಾರು ರಸ್ತೆ ಪಕ್ಕದಲ್ಲಿ ಬಸ್ ನಿಲ್ಲಿಸಿದ್ದು, ಆಗ ಆರೋಪಿಯಾದ ನೀವು ಪುನಃ ಚಾಸಾ-3 ರವರೊಂದಿಗೂ ಗಲಾಟೆ ಮಾಡಿಕೊಳ್ಳುತ್ತಿದ್ದು ಇದನ್ನು ಕೇಳಲು ಹೋದ ಚಾಸಾ-1 ಮತ್ತು 2 ರವರಿಗೆ ಆರೋಪಿಯಾದ ನೀವು ಅವಾಚ್ಯವಾಗಿ ಬೈದು ಇದು ಸಾರ್ವಜನಿಕ ಬಸ್ ನಾನೇನಾದರೂ ಮಾಡುತ್ತೇನೆ ನೀವು ಯಾರು ಕೇಳುವುದಕ್ಕೆ ಎಂದು ಏರುಧ್ವನಿಯಲ್ಲಿ ಬೈದಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**352** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, ಆರೋಪಿಯಾದ ನೀವು ಚಾಸಾ-1 ಮತ್ತು ಚಾಸಾ-2 ರವರಿಗೆ ಕೈಯಿಂದ ಮುಖಕ್ಕೆ, ಎದೆಗೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**115(2)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, ಆರೋಪಿಯಾದ ನೀವು ಚಾಸಾ-1 ಮತ್ತು ಚಾಸಾ-2 ರವರಿಗೆ ಸರ್ಕಾರಿ ಕೆಲಸವನ್ನು ನಿರ್ವಹಿಸದಂತೆ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**132** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, ಆರೋಪಿಯಾದ ನೀವು ಚಾಸಾ-1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**351(2)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ18.06.2026

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ18.06.2026

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ.

ಆರೋಪಿತರ ಸಹಿಃ